● ಎಸ್.ಆರ್. ರಾವಳ, ತೇರದಾಳ

ಆಧುನಿಕ ಮಾನವನು ದೂರದ ಆಕಾಶಕಾಯಗಳತ್ತ ದಾಪುಗಾಲು ಇಡುತ್ತಿರುವಾಗ ಈ ಲೇಖಕ ಜೋಡು ಪುರಾಣದ ಬಗ್ಗೆ ಬರೆಯುತ್ತಿದ್ದಾನಲ್ಲ ಎಂದು ದಯವಿಟ್ಟು ಭಾವಿಸಬೇಡಿ. ಮಾನವನು ಆಕಾಶಕ್ಕೆ ಲಗ್ಗೆ ಹಾಕಿದರೂ ನೆಲದ ಮೇಲಿಯೇ ಜೀವಿಸಬೇಕು. ಯಾವುದೇ ವಿಷಯವಿದ್ದರೂ ಅದಕ್ಕೆ ಅದರದೇ ಆದ ಗತಿ ಇರುತ್ತದೆ. ಅದು ನಿರ್ದಿಷ್ಟ ಪರಧಿಯೊಳಗೆ ತನ್ನ ಪ್ರಭಾವವನ್ನು ಬೀರುತ್ತಲೇ ಇರುತ್ತದೆ. ಇದನ್ನು ನಾವು ಟೀವಿಯಲ್ಲಿ ದಿನನಿತ್ಯ ನೋಡುತ್ತಲೇ ಇದ್ದೇವೆ. ಆಧುನಿಕ ಅತಿರೇಕಗಳು, ಸಾಧನೆಗಳು ಒಂದು ಸಮಯದಲ್ಲಿ ಪ್ರಸಾರವಾಗುತ್ತಿದ್ದರೆ, ಅದೇ ಟೀವಿಯಲ್ಲಿ ಬೇರೊಂದು ಸಮಯದಲ್ಲಿ ದೇವರು, ಪುರಾಣ, ನಂಬಿಕೆ, ಆಚರಣೆಗಳ ಚರ್ಚೆ, ವಿಚಾರ ಮಂಡನೆಯ ಕಾರ್ಯಕ್ರಮಗಳನ್ನು ನಾವೆಲ್ಲ ನಿತ್ಯ ನೋಡುತ್ತಿರುವಾಗ ಈ ಪುರಾಣಗಳಿಗೆ ಕೊನೆ ಇದೆ ಎಂದು ಹೇಳಲಾದೀತೆ! ದೇವ ದೇವತೆಗಳ ಕುರಿತಾಗಿ ಹಲವಾರು ಪುರಾಣಗಳಿವೆ. ಆದರೆ, ನಾನು ಹೇಳ ಹೊರಟಿರುವುದು ಒಂದು ವಸ್ತುವಿನ ಪುರಾಣ. ಅದು ನಮಗೂ, ನಿಮಗೂ ಎಲ್ಲರಿಗೂ, ಎಲ್ಲ ಕಾಲಕ್ಕೂ ಅವಶ್ಯವಾಗಿರುವ ವಸ್ತುವೊಂದರ ಪುರಾಣ. ಅದೇ ಜೋಡು ಪುರಾಣ!

ಜೋಡು ಎಂದರೆ ಒಂದಕ್ಕೆ ಇನ್ನೊಂದು ಜೊತೆಯಾಗಿರುವುದು. ಒಂದನ್ನು ಅಗಲಿ ಇನ್ನೊಂದು ಇರದು. ಒಂದು ವೇಳೆ ಇದ್ದರೂ ಅದು ಪರಿಪೂರ್ಣ ಎನಿಸಲಾರದು. ಮಚ್ಚೆ, ಮೆಟ್ಟು, ತೆರವು, ಪಾದರಕ್ಷೆ, ಪಾದುಕೆ, ಚಪ್ಪಲಿ, ಶೂ, ಸ್ಯಾಂಡಲ್ಸ್, ಸ್ಲಿಪರ್ ಇತ್ಯಾದಿ ಹೆಸರಿನಿಂದ ಜೋಡುಗಳನ್ನು ಕರೆಯಲಾಗುತ್ತದೆ. ಪಾದಗಳನ್ನು ರಕ್ಷಿಸುವ ಪರಿಕರಗಳಾದ ಜೋಡುಗಳನ್ನು ಇತರ ಎಲ್ಲಾ ವಸ್ತುಗಳಿಗಿಂತ ಭಿನ್ನವಾಗಿ ಕಾಣಲಾಗುತ್ತದೆ; ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ಜೋಡುಗಳನ್ನು ಎಲ್ಲ ಸ್ಥಳಗಳಿಗೂ ಒಯ್ಯುವಂತಿಲ್ಲ. ಕೆಲವೊಂದು ಸ್ಥಳಗಳಲ್ಲಿ ಇವುಗಳ ಪ್ರವೇಶ ನಿಷಿದ್ಧವೆಂದೇ ಹೇಳಬಹುದು. ಕೆಲವು ಪ್ರಕಾರದ ಜೋಡುಗಳು ಉನ್ನತ ಸ್ಥಾನದಲ್ಲಿ ಪ್ರವೇಶ ಗಿಟ್ಟಿಸಿಕೊಂಡರೂ ಅದು ತಾತ್ಕಾಲಿಕವಾಗಿರುತ್ತದೆ. ಜೋಡುಗಳನ್ನು ಮೊದಲು ಚರ್ಮದಿಂದ ತಯಾರಿಸುತ್ತಿದ್ದರು. ವೈಜ್ಞಾನಿಕ ಅನ್ವೇಷಣೆಯಿಂದಾಗಿ, ಪ್ಲಾಸ್ಟಿಕ್, ರಬ್ಬರ್ ಮುಂತಾದ ವಸ್ತುಗಳಿಂದ ಜೋಡುಗಳನ್ನು ಈಗ ತಯಾರಿಸಲಾಗುತ್ತಿದೆ. ಉಪಯೋಗಿಸುವವರ ವ್ಯಕ್ತಿತ್ವ ಮತ್ತು ಅವರ ಆರ್ಥಿಕ ಶಕ್ತಿಗೆ ಅನುಸಾರವಾಗಿ ಜೋಡುಗಳನ್ನು ಖರೀದಿಸಲಾಗುತ್ತದೆ. ಸಾಮಾನ್ಯವಾಗಿ ಎಲ್ಲರೂ ಒಂದೆರಡು ಜೊತೆ ಪಾದರಕ್ಷೆಗಳನ್ನು ಉಪಯೋಗಿಸುವುದುಂಟು. ಕೆಲವರು ಸಭೆ ಸಮಾರಂಭ, ವಿಶೇಷ ಸಂದರ್ಭಗಳಲ್ಲಿ ತಾವು ಧರಿಸಿದ ಉಡುಪುಗಳಿಗೆ ಹೊಂದುವಂತೆ ಬೇರೆ ಬೇರೆ ಪ್ರಕಾರದ ಜೋಡುಗಳನ್ನು ಬಳಸುತ್ತಾರೆ. ನಮ್ಮ ಜೊತೆ ನೆರೆರಾಜ್ಯ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಬರೋಬ್ಬರಿ 300 ಜೊತೆ ಜೋಡುಗಳನ್ನು ಇಟ್ಟುಕೊಂಡಿದ್ದಾರಂತೆ. ಅಲ್ಲದೆ ಈ ಚಪ್ಪಲಿಗಳನ್ನು ಉತ್ತರಪ್ರದೇಶದಿಂದ ಹೆಲಿಕಾಪ್ಟರ್ ಮುಖಾಂತರ ತರಿಸಿಕೊಂಡಿದ್ದಾರಂತೆ. ಅಮ್ಮ ಜಯಲಲಿತಾರಿಂದ ತಮಗೆ ಹೆಲಿಕಾಪ್ಟರಿನಲ್ಲಿ ಹಾರುವ ಯೋಗ ಸಿಕ್ಕಿತಲ್ಲ ಎಂದು ಜೋಡುಗಳು ಖುಷಿಗೊಂಡು 'ಹಾರುತ ದೂರಾ ದೂರಾ... ನಾವಾಗುವಾ ಚಂದಿರ ತಾರಾ...' ಎಂಬ ಯುಗಳ ಗೀತೆ ಹಾಡಲು ಪ್ರಾರಂಭಿಸಿದರೆ ಪೈಲಟ್ ದಿಕ್ಕು ತಪ್ಪಿ ಇನ್ನೂ ಎತ್ತರಕ್ಕೆ ಒಯ್ಯಲು ಸಿದ್ಧರಾಗಬಹುದು. ಅವರ ಹಾಗೆ